*MVC No: 1123/2022*
*PW-6*

**ಲಘು ವ್ಯವಹಾರಗಳ ನ್ಯಾಯಾಲಯ, ಬೆಂಗಳೂರು**
**(3ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ)**
**ಎಂವಿಸಿ.ನಂ.1123 /2022**

**ಪಿ.ಡಬ್ಲ್ಯೂ-6**

| | |
|---|---|
| ಸಾಕ್ಷಿಯ ಹೆಸರು | ಚಿದಾನಂದ ನಾವಿ |
| ತಂದೆಯ ಹೆಸರು | ಕಿರಣ್ |
| ವಯಸ್ಸು | 35 ವರ್ಷ |
| ಹುದ್ದೆ | ಪಿಎಸ್ಐ, ಕೋಣನಕುಂಟೆ ಪೋಲೀಸ್ ಠಾಣೆ, ಬೆಂಗಳೂರು |
| ವಿಳಾಸ | ಆರ್ ಆರ್ ನಗರ, ಬೆಂಗಳೂರು. |

**ಸಾಕ್ಷಿಗೆ ದಿನಾಂಕ 14-01-2026** ರಂದು **ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆಃ** ಅರ್ಜಿದಾರರ ಪರ ಶ್ರೀ ಜಿ.ಹೆಚ್.ಎಸ್ ವಕೀಲರಿಂದಃ

**ನನಗೆ ನ್ಯಾಯಾಲಯದಿಂದ ಸಮನ್ಸ್ ಬಂದಿದ್ದು, ಆದಕ್ಕನುಗುಣವಾಗಿ ನಾನು ನ್ಯಾಯಾಲಯಕ್ಕೆ ಹಾಜರಾಗಿರುತ್ತೇನೆ.**

ದಿಃ**07.08.2022** ರಿಂದ ದಿಃ**15.10.2023** ರವರೆಗೆ ಬಸವನಗುಡಿ ಸಂಚಾರಿ ಪೊಲೀಸ್ ಠಾಣೆಯ, ಪಿಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ**08.08.2022** ರಂದು ಮುಂದಿನ ತನಿಖೆಗಾಗಿ ಈ ಪ್ರಕರಣದ ಕಡತವನ್ನು ರಾಜೇಂದ್ರಪ್ರಸಾದ್ ಪಿಎಸ್ಐ ರವರಿಂದ ಪಡೆದುಕೊಂಡು, ಅಪರಾಧದಲ್ಲಿ ಭಾಗಿಯಾಗಿರುವ ಆಟೋ ಮತ್ತು ಆಪಾದಿತನ ಪತ್ತೆಗಾಗಿ ಸಿಬ್ಬಂದಿಗಳನ್ನು ನೇಮಿಸಿರುತ್ತೇನೆ. ದಿಃ**09.08.2022** ರಂದು ಎ ಎಸ್ ಐ ಸದಾನಂದ್ ಹಾಗೂ ಹೆಚ್ ಸಿ **10056** ವಿನಯ್ ರವರಿಗೆ ಈ ಪ್ರಕರಣದಲ್ಲಿ ಭಾಗಿಯಾದ ಆಟೋ ಮತ್ತು ಆಪಾದಿತನ ಪತ್ತೆಗಾಗಿ ಜ್ಞಾಪನ ಪತ್ರ ನೀಡಿರುತ್ತೇನೆ. ದಿಃ**10.08.2022** ರಂದು ಎ ಎಸ್ ಐ ಸದಾನಂದರವರು ಆಟೋ ಮತ್ತು ಆಪಾದಿತ ಪತ್ತೆಯಾಗಿರುವುದಿಲ್ಲವೆಂದು ವರದಿ ನೀಡಿರುತ್ತಾರೆ. ದಿಃ**24.08.2022** ರಂದು ಪುನಃ ಎ ಎಸ್ ಐ ಸದಾನಂದರವರಿಗೆ ಈ ಪ್ರಕರಣದಲ್ಲಿ ಭಾಗಿಯಾದ ಆಟೋ ಮತ್ತು ಆಪಾದಿತನ ಪತ್ತೆಗಾಗಿ ಜ್ಞಾಪನ ಪತ್ರ ನೀಡಿರುತ್ತೇನೆ. ದಿಃ**25.08.2022** ರಂದು ಎ ಎಸ್ ಐ ಸದಾನಂದರವರು ಬೃಂದಾವನ ನಗರ,

ಜಿಂಕೆ ಪಾರ್ಕ್ ಚಾಮರಾಜಪೇಟೆ 5 ನೇ ಮುಖ್ಯ ರಸ್ತೆ, ಕೆ ಜಿ ನಗರ ಪ್ರದೇಶಗಳಲ್ಲಿ ವಿಚಾರಿಸಲಾಗಿ ಮತ್ತು ಭಾತ್ಮೀದಾರರನ್ನು ಕೇಳಲಾಗಿ ಯಾವುದೇ ಮಾಹಿತಿ ದೊರೆತಿರುವುದಿಲ್ಲ ಎಂದು ಮಾಹಿತಿ ನೀಡಿರುತ್ತಾರೆ. ದಿಃ14.09.2022 ರಂದು ಠಾಣಾ ಎ ಎಸ್ ಐ ಅಂಧಾನಯ್ಯರವರಿಗೆ ಈ ಪ್ರಕರಣದಲ್ಲಿ ಭಾಗಿಯಾದ ಆಟೋ ನಂ.ಕೆಎ-03-ಡಿ-3288 ಮತ್ತು ಆಪಾದಿತನ ಪತ್ತೆಗಾಗಿ ಜ್ಞಾಪನ ಪತ್ರ ನೀಡಿರುತ್ತೇನೆ. ದಿಃ15.09.2022 ರಂದು ಎ ಎಸ್ ಐ ಅಂಧಾನಯ್ಯರವರು ಠಾಣಾ ಸರಹದ್ದಿನ ಶಂಕರಪುರ, ಚಾಮರಾಜಪೇಟೆ ಹಾಗೂ ವಿವಿ ಪುರ ಮುಖ್ಯ ರಸ್ತೆಗಳಲ್ಲಿ ಭೇಟಿ ನೀಡಿ ಪ್ರಕರಣಕ್ಕೆ ಸಂಬಧಿಸಿದ ವಾಹನ ಹಾಗೂ ಆರೋಪಿಯನ್ನು ಪತ್ತೆಮಾಡಲು ಯಾವುದೇ ಮಾಹಿತಿ ಲಭ್ಯವಿಲ್ಲವೆಂದು ವರದಿ ನೀಡಿರುತ್ತಾರೆ. ನಂತರ ದಿಃ15.10.2022 ರಂದು ಈ ಪ್ರಕರಣದ ಅಂತಿಮ ಸಿ-ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸುವಂತೆ ಕೋರಿ, ಮಾನ್ಯ ಎಸಿಪಿ, ಜಯನಗರ ಸಂಚಾರ ದಕ್ಷಿಣ ವಿಭಾಗ ರವರಲ್ಲಿ ಕೇಳಿಕೊಳ್ಳಲು ಪಿ ಐ ರವರ ಮುಖಾಂತರ ಕಳುಸಿರುತ್ತೇನೆ.

**ಈ ಹಂತದಲ್ಲಿ ಅರ್ಜಿದಾರರ ಪರ ವಕೀಲರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸುವಂತೆ ಕೋರಿ, ಪಾಟೀ ಸವಾಲಿಗೆ ಅನುಮತಿ ಕೋರಿದ್ದು, ವಿಚಾರಿಸಿ ಅನುಮತಿಸಲಾಯಿತು.**
**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ.ಜಿ ಸಿ ಹೆಚ್ ವಕೀಲರಿಂದಃ**

1. ನಾನು ವೈಯಕ್ತಿಕವಾಗಿ ಅಪಘಾತದ ಸ್ಥಳಕ್ಕೆ ಭೇಟಿ ನೀಡಿರುತ್ತೇನೆ. ಸಿ-ವರದಿಯನ್ನು ಸಲ್ಲಿಸುವಾಗ ದೂರುದಾರರಿಗೆ ನೋಟೀಸ್ ಕಳುಹಿಸಿರುತ್ತೇವೆ. ಸದರಿ ನೋಟೀಸಿನ ಪ್ರತಿಯನ್ನು ಹಾಜರುಪಡಿಸುವೀರಾ ಎಂದರೆ ಕಡತದಲ್ಲಿ ಕಂಡುಬಂದಿರುವುದಿಲ್ಲ. ಈ ಪ್ರಕರಣದ ತನಿಖೆಯನ್ನು ಸರಿಯಾಗಿ ನಡೆಸಿರುವುದಿಲ್ಲ ಎಂದರೆ ಸರಿಯಲ್ಲ. ಆಟೋ ನಂ.ಕೆಎ-03-ಡಿ-3288 ನೈಜ ಮಾಲೀಕ ತನ್ನ ಆಟೋದ ನೋಂದಾಯಿತ ಸಂಖ್ಯೆಯನ್ನು ಬೇರೊಬ್ಬರು ಬಳಸುತ್ತಿರುವ ಬಗ್ಗೆ ದೂರನ್ನು ನೀಡಿದ್ದರಾ ಎಂದರೆ ಇಲ್ಲ. ದೂರುದಾರರು ಸಂಪೂರ್ಣ ಮಾಹಿತಿ ನೀಡಿದ್ದರು ಎಂದರೆ ಸರಿ. ನೈಜ ಆಟೋ ಮಾಲೀಕನನ್ನು ನನ್ನ ಮುಂಚಿನ ತನಿಖಾಧಿಕಾರಿ ವಿಚಾರಣೆ ಮಾಡಿದಾಗ ಅಪಘಾತಪಡಿಸಿದ

ಆಟೋ ಮತ್ತು ತನ್ನ ಆಟೋ ಬೇರೆ ಎಂದು ಮನವರಿಕೆ ಮಾಡಿರುತ್ತಾನೆ. ದೂರುದಾರರ ಗಂಡನ ಅಂಗಡಿಯ ಬಳಿ ಪರಿಚಿತ ವಕೀಲರನ್ನು ನೇಮಕ ಮಾಡಿಕೊಳ್ಳುತ್ತೀರಾ ಎಂದು ಹಲವಾರು ಬಾರಿ ಠಾಣಾ ಸಿಬ್ಬಂದಿಯನ್ನು ಕಳಿಸಿಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಾವು ಸೂಚಿಸಿದ ವಕೀಲರನ್ನು ಒಪ್ಪದೇ ಇದ್ದಾಗ ಉದ್ದೇಶಪೂರ್ವಕವಾಗಿ ಸಿ-ವರದಿ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

ಪಾ**ಟೀ ಸವಾಲುಃ ಎರಡನೇ ಎದುರುದಾರರ ಪರ ವಕೀಲರು** ಪಾ**ಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.**
ಪಾ**ಟೀ ಸವಾಲುಃ 1 ನೇ ಎದುರುದಾರರು ಏಕ-ಪಕ್ಷೀಯ, ಆದ್ದರಿಂದ** ಪಾ**ಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**
**ಮರು-ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.,**